■ ವಿಶಾಖ ಎನ್.



# ಹೃತಿಕ್–ಜೂ.ಎನ್‌ಟಿಆರ್ ಮಾಡುವರೇ ಮೋಡಿ?

ಒಂದು ಕಾಲವಿತ್ತು. ಮದ್ರಾಸ್‌ನಲ್ಲಿ ಸಿನಿಮಾ ಸ್ಟುಡಿಯೊಗಳು ಇಡುಕಿರಿದಂತೆ ಇರುತ್ತಿದ್ದವು. ದಕ್ಷಿಣ ಭಾರತದ ಬಹುತೇಕ ಭಾಷೆಗಳ ಸಿನಿಮಾ ಮಾಡುವ ಕಾರ್ಖಾನೆಗಳಂತೆ ಅವು ಕಾಣುತ್ತಿದ್ದವು. ಅಲ್ಲಿ ನಟ–ನಟಿಯರು ತಮ್ಮ ಪ್ರತಿಭೆಗೆ ಅನುಗುಣವಾಗಿ ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ಹಾರುತ್ತಿದ್ದರು. ರೀಮೇಕ್ ಹಕ್ಕುಗಳನ್ನು ಲಗುಬಗೆಯಲ್ಲಿ ಹಿಡಿದು ತಂದು ತಮ್ಮ ಭಾಷೆಯಲ್ಲಿ ಅದನ್ನು ನಿರ್ಮಿಸಿ, ಹಣ ಮಾಡಿಕೊಳ್ಳುವ 'ಪ್ರಚಂಡ ಕುಳ' ಅವರಂಥವರೂ ಇದ್ದರೆನ್ನಿ.

ಈಗ ಧ್ರುವೀಕರಣದ ಜಮಾನ. ಜೂನಿಯರ್ ಎನ್‌ಟಿಆರ್ ಅದನ್ನು ತಮ್ಮದೇ ಪರಿಭಾಷೆಯಲ್ಲಿ ಬಣ್ಣಿಸಿರುವುದು ಆಸಕ್ತಿಕರವಾಗಿದೆ. 'ಈ ದಿನಮಾನದಲ್ಲಿ ಕಾಲಿವುಡ್, ಮಾಲಿವುಡ್, ಟಾಲಿವುಡ್ ಎನ್ನುವುದೆಲ್ಲ ಅಳಿಸಿಹೋಗಿದೆ; ಏನಿದ್ದರೂ ಭಾರತೀಯ ಸಿನಿಮಾ ಎನ್ನಬೇಕಷ್ಟೆ' ಎನ್ನುವುದು ಅವರ ಹೊಸ ನುಡಿವರಸೆ. ಅದಕ್ಕೆ ಕಾರಣ–'ವಾರ್ 2' ಚಿತ್ರದ ಪ್ರಚಾರದ ಭರಾಟೆ.

ಆಗಸ್ಟ್ 14ರಂದು 'ವಾರ್ 2' ಸಿನಿಮಾ ತೆರೆಕಾಣುತ್ತಿದೆ. 'ಹೃತಿಕ್ ರೋಷನ್ ಹಾಗೂ ಜೂನಿಯರ್ ಎನ್‌ಟಿಆರ್ ಇಬ್ಬರೂ ಒಟ್ಟಾಗಿ ನೃತ್ಯ ಮಾಡಿದರೆ ಹೇಗಿರಬೇಡ?' ಎಂದು ಉದ್ಗಾರ ತೆಗೆಯುತ್ತಿದ್ದವರ ಕುತೂಹಲಕ್ಕೆ ತೆರೆಯೂ ಬೀಳಲಿದೆ.

ಹೃತಿಕ್ ರೋಷನ್ ಅವರನ್ನು 'ಸರ್' ಎಂದೇ ಸಂಬೋಧಿಸುವ ಜೂನಿಯರ್ ಎನ್‌ಟಿಆರ್ ಅವರಿಗೆ ಇದು ದೀರ್ಘ ಕಾಲದ ಕನಸು ನನಸಾದ ಸಮಯ. ಅಂತಹ ನಟರ ಜೊತೆಗೆ ಅಭಿನಯಿಸುವ ಅವಕಾಶದಿಂದ ಅವರ ಮಹತ್ವಾಕಾಂಕ್ಷೆಯೊಂದು ಈಡೇರಿದಂತಾಗಿದೆ.

ಹೃತಿಕ್ ಪ್ರಕಾರ ಜೂನಿಯರ್ ಎನ್‌ಟಿಆರ್ ಅವರಿಗೆ ಯಾವ ಸನ್ನಿವೇಶಕ್ಕೂ ತಾಲೀಮಿನ ಅಗತ್ಯವೇ ಇಲ್ಲ. 'ಜೂನಿಯರ್ ಎನ್‌ಟಿಆರ್ ಅವರು ಸಹಜ ನಟ. ಅವರ ಮಿದುಳಿನಲ್ಲಿ ಎಂತಹ ಪಾತ್ರಕ್ಕೂ ಬೇಕಾದ ಸಿದ್ಧತೆ ಅದು ಹೇಗೆ, ಯಾವಾಗ ಆಗಿರುವುದೋ ಎಂಬ ಕುತೂಹಲವು ನನ್ನಲ್ಲಿ ಮೂಡಿತು. ಸೆಟ್‌ನಲ್ಲಿ ಅವರು ಎಲ್ಲಕ್ಕೂ ಅಷ್ಟು ಚಕಚಕನೆ ನ್ಯಾಯ ಒದಗಿಸುತ್ತಿದ್ದರು. ಅವರಿಂದ ನಾನು ಕಲಿತಿರುವ ಅನೇಕ ಸಂಗತಿಗಳನ್ನು ಇನ್ನು ಮುಂದೆ ಅಳವಡಿಸಿಕೊಳ್ಳಲಿದ್ದೇನೆ' ಎಂದು ಹೃತಿಕ್ ರೋಷನ್ ಹೇಳಿರುವುದನ್ನು ಕೇಳಿ ಜೂನಿಯರ್ ಎನ್‌ಟಿಆರ್ ಅವರಲ್ಲಿ ಸಾರ್ಥಕ್ಯಭಾವ ಮೂಡಿದೆ.ಅಯಾನ್ ಮುಖರ್ಜಿ ನಿರ್ದೇಶನದ 'ವಾರ್ 2' ಸಿನಿಮಾದ ಪಂಜಾಬಿ ಶೈಲಿಯ 'ಆವನ್ ಜಾವನ್' ಯುಗಳಗೀತೆಯೊಂದು ಇತ್ತೀಚೆಗೆ ಬಿಡುಗಡೆಯಾಗಿದೆ. ಅದರಲ್ಲಿ ನಾಯಕಿ ಕಿಯಾರಾ ಅಡ್ವಾಣಿ ಹಾಗೂ ಹೃತಿಕ್ ಇಬ್ಬರ ನಡುವಿನ 'ಕೆಮಿಸ್ಟ್ರಿ' ಕುರಿತೂ ವ್ಯಾಪಕವಾಗಿ ಮೆಚ್ಚುಗೆ ವ್ಯಕ್ತವಾಗಿದೆ. ಈ ಚಿತ್ರದಲ್ಲಿ ಜೂನಿಯರ್ ಎನ್‌ಟಿಆರ್ ಪ್ರತಿನಾಯಕನ ಪಾತ್ರ ನಿರ್ವಹಿಸಿದ್ದಾರೆ. 'ಆರ್‌ಆರ್‌ಆರ್' ಸಿನಿಮಾದಿಂದ ದೇಶದ ಹಲವು ರಾಜ್ಯಗಳಲ್ಲಿ ಹಾಗೂ ವಿದೇಶಗಳಲ್ಲಿ ಜನಪ್ರಿಯರಾಗಿರುವ ಜೂನಿಯರ್ ಎನ್‌ಟಿಆರ್ ಅವರ ಹಿಂದಿ ಚಿತ್ರರಂಗ ಪ್ರವೇಶದ ಫಲಿತಾಂಶ ಹೇಗಿರಲಿದೆಯೋ, ನೋಡಬೇಕು. ■

# ಕಿಂಗ್‌ಡಮ್

## ಗೆದ್ದಿತೋ, ಸೋತಿತೋ?

ವಿಜಯ್ ದೇವರಕೊಂಡ ಅಭಿನಯಿಸಿರುವ, ಕೋವಿಡ್ ನಂತರ ಬಿಡುಗಡೆಯಾದ ಸಿನಿಮಾಗಳ ಪೈಕಿ ಅತಿ ಹೆಚ್ಚು ಹಣವನ್ನು 'ಕಿಂಗ್‌ಡಮ್' ಸಿನಿಮಾ ಗಳಿಸಿದೆ ಎಂದು ಚಿತ್ರರಂಗದ ವರದಿಗಳು ಹೇಳುತ್ತಿವೆ. ಆದರೂ ಅದು ಗೆಲುವಿನ ಪಟ್ಟ ಸೇರಲು ಇನ್ನೂ ಆಗಿಲ್ಲ.

ಗೌತಮ್ ತಿನ್ನನೂರಿ ನಿರ್ದೇಶನದ ಈ ಚಿತ್ರಕ್ಕೆ ವಿಜಯ್ ದೇವರಕೊಂಡ ದೀರ್ಘಾವಧಿ ಪ್ರಚಾರ ನಡೆಸಿದ್ದರಾದರೂ, ನಿರೀಕ್ಷಿತ ಯಶಸ್ಸು ಸಿಕ್ಕಿಲ್ಲವೆಂದೇ ವಿಶ್ಲೇಷಿಸಲಾಗುತ್ತಿದೆ.

ಆರು ದಿನಗಳ ಅವಧಿಯಲ್ಲಿ ಸಿನಿಮಾ ಒಟ್ಟು ₹50 ಕೋಟಿಗೂ ಮೀರಿ ಹಣವನ್ನು ಗಳಿಸಿದೆ ಎಂಬ ಲೆಕ್ಕಾಚಾರವಿದೆ. ಆದರೆ ಚಿತ್ರೀಕರಣಕ್ಕೆ ವ್ಯಯವಾದ ಹಣವು ನಿರೀಕ್ಷೆಗೂ ಮೀರಿದ್ದು, ಒಟ್ಟಾರೆ ವಹಿವಾಟು ಅಷ್ಟೇನೂ ಹೇಳಿಕೊಳ್ಳುವಂತೆ ಇಲ್ಲ ಎಂದು 'Sacnilk' ವೆಬ್‌ಸೈಟ್ ವರದಿ ಮಾಡಿದೆ. ಸಿನಿಮಾವೊಂದು ದೇಸಿ ಹಾಗೂ ವಿದೇಶಿ ಮಾರುಕಟ್ಟೆಯಲ್ಲಿ ಎಷ್ಟು ಹಣವನ್ನು ಗಳಿಸಿದೆ ಎನ್ನುವ ವರದಿಯನ್ನು ನಿಯಮಿತವಾಗಿ ಈ ವೆಬ್‌ಸೈಟ್ ಮಾಡುತ್ತದೆ.

ವಿಜಯ್ ದೇವರಕೊಂಡ ನಟನಾಗಿ ಹಲವು ಪ್ರಯೋಗಗಳಿಗೆ ಒಡ್ಡಿಕೊಳ್ಳುತ್ತಾ ಬಂದಿದ್ದಾರೆ. ಭಾಗ್ಯಶ್ರೀ ಬೋರ್ಸೆ ಅವರ ಸ್ನಿಗ್ಧ ಸೌಂದರ್ಯ, ನಟ ಸತ್ಯದೇವ್ ಅವರ ಅಭಿನಯದ ಇಂಧನ ಕೂಡ 'ಕಿಂಗ್‌ಡಮ್' ಸಿನಿಮಾ ಮೇಲೆತ್ತಲು ಅಷ್ಟಾಗಿ ನೆರವಿಗೆ ಬಂದಿಲ್ಲ. ಅನಿರುದ್ಧ್ ರವಿಚಂದರ್ ಅವರಿಂದ ಹಾಡುಗಳಿಗೆ ಸ್ವರ ಸಂಯೋಜನೆ ಮಾಡಿಸಲಾಗಿತ್ತು. ಅದರಿಂದಲೂ ಪ್ರೇಕ್ಷಕರಿಗೆ ಗಾಳ ಹಾಕಲು ಸಾಧ್ಯವಾಗಿಲ್ಲ. ನಾಗ ವಂಶಿ, ಸಾಯಿ ಸೌಜನ್ಯ ನಿರ್ಮಾಣದ 'ಕಿಂಗ್‌ಡಮ್' ವಿಜಯ್ ದೇವರಕೊಂಡ ಅವರ ಸಿನಿಮಾ ಬದುಕಿನ ಎರಡನೇ ಇನಿಂಗ್ಸ್‌ಗೆ ಮುನ್ನುಡಿಯಾಗಬಹುದು ಎನ್ನುವ ನಿರೀಕ್ಷೆಯೂ ಸುಳ್ಳಾಗಿದೆ.

